# ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ

ಫೋನ ನಂ. (ಮೋ): 94806 96389
(ಕಛೇರಿ): 08354-230280
(ಫ್ಯಾಕ್ಸ): 08354-235152
e-mail: registrar@uhsbagalkot.edu.in

ಕುಲಸಚಿವರು,
ಉದ್ಯಾನಗಿರಿ, ಸೀಮಿಕೇರಿ ಬೈಪಾಸ
ನವನಗರ, ಬಾಗಲಕೋಟ - 587 104
ರಾಜ್ಯ: ಕರ್ನಾಟಕ

ಸಂಖ್ಯೆ : ಕುಸ/ತೋವಿವಿ/ಘಟಿಕೋತ್ಸವ-7 / /2017-18 ದಿನಾಂಕ:28.11.2017

## ಅಧಿಸೂಚನೆ

*****

**ವಿಷಯ:** ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ 7ನೇ ಘಟಿಕೋತ್ಸವಕ್ಕೆ ಅರ್ಜಿ ಸಲ್ಲಿಸುವ ಕುರಿತು.

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟದ 7ನೇ ಘಟಿಕೋತ್ಸವವು ಜನವರಿ 2018 ರ ಕೊನೆಯ ಪಕ್ಷದಲ್ಲಿ ಜರುಗಲಿದೆ. ಕಾರಣ ಈ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಮಹಾವಿದ್ಯಾಲಯಗಳಲ್ಲಿ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಗಳಲ್ಲಿ ದಿ:31.12.2017 ರ ಒಳಗಾಗಿ ತೇರ್ಗಡೆ ಹೊಂದಿರುವ ಅಭ್ಯರ್ಥಿಗಳು ಸದರಿ ಘಟಿಕೋತ್ಸವದಲ್ಲಿ "ಸಮಕ್ಷಮ" ಇಲ್ಲವೇ " ಅನುಪಸ್ಥಿತಿಯಲ್ಲಿ" ಪದವಿಯನ್ನು ಪಡೆಯಬಹುದಾಗಿದೆ. ಈ ಕುರಿತಂತೆ ನಿಗದಿತ ಅರ್ಜಿ ನಮೂನೆ, ಚಲನ್ ಪ್ರತಿ ಹಾಗೂ ಹೆಚ್ಚಿನ ಮಾಹಿತಿಯನ್ನು ವಿಶ್ವವಿದ್ಯಾಲಯದ ವೆಬ್ ಸೈಟ್(ಅಂತರಜಾಲ)**www.uhsbagalkot.edu.in** ನಲ್ಲಿ ದಿನಾಂಕ **28.11.2017** ರಿಂದ ಡೌನಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.

ಭರ್ತಿ ಮಾಡಿದ ಅರ್ಜಿಯನ್ನು ಅಗತ್ಯ ದಾಖಲಾತಿ ಮತ್ತು ಅವಶ್ಯಕ ಶುಲ್ಕ ಪಾವತಿಸಿದ ರಶೀದಿ ಜೊತೆಗೆ ದಿನಾಂಕ: **31.12.2017** ರ ಒಳಗೆ **ಕುಲಸಚಿವರು, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಉದ್ಯಾನಗಿರಿ, ಬಾಗಲಕೋಟ-587104** ಇವರಿಗೆ ಸಲ್ಲಿಸತಕ್ಕದ್ದು. 'ಸಮಕ್ಷಮ ಇಲ್ಲವೇ 'ಅನುಪಸ್ಥಿತಿ'ಯಲ್ಲಿ ಪದವಿ ಪ್ರಮಾಣ ಪತ್ರ ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ಈ ಕೆಳಗಿನಂತೆ ನಿಗದಿತ ಶುಲ್ಕವನ್ನು ಪಾವತಿಸಬೇಕು. ಶುಲ್ಕ ಪಾವತಿಸಬೇಕಾದ ಬ್ಯಾಂಕ ಚಲನ್ ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ. ಅರ್ಜಿ ಶುಲ್ಕ ಹಾಗೂ ಬ್ಯಾಂಕ ಸೇವಾ ಶುಲ್ಕವನ್ನು ಸ್ಟೇಟ್ ಬ್ಯಾಂಕ ಆಫ್ ಇಂಡಿಯಾದ ಯಾವುದಾದರೂ ಶಾಖೆಯಲ್ಲಿ ಪಾವತಿಸಿ ವಿಶ್ವವಿದ್ಯಾಲಯದ ಪ್ರತಿಯನ್ನು ಅರ್ಜಿ ಜೊತೆಗೆ ಅಗತ್ಯ ದಾಖಲಾತಿಯೊಂದಿಗೆ ಲಗತ್ತಿಸಬೇಕು. ಶುಲ್ಕದ ವಿವರ ಈ ಕೆಳಕಂಡಂತೆ ಇರುತ್ತದೆ.

| ಪದವಿ | ಸಮಕ್ಷಮ | ಅನುಪಸ್ಥಿತಿಯಲ್ಲಿ |
|---|---|---|
| ಬಿ.ಎಸ್ಸಿ. (ತೋಟಗಾರಿಕೆ) | ರೂ.1,500 + ಬ್ಯಾಂಕ ಸೇವಾ ವೆಚ್ಚ | ರೂ.2,000+ ಬ್ಯಾಂಕ ಸೇವಾ ವೆಚ್ಚ |
| ಎಂ.ಎಸ್ಸಿ. (ತೋಟಗಾರಿಕೆ) | ರೂ.3,000+ ಬ್ಯಾಂಕ ಸೇವಾ ವೆಚ್ಚ | ರೂ.3,500+ ಬ್ಯಾಂಕ ಸೇವಾ ವೆಚ್ಚ |
| ಪಿಎಚ್.ಡಿ (ತೋಟಗಾರಿಕೆ) | ರೂ.5,000+ ಬ್ಯಾಂಕ ಸೇವಾ ವೆಚ್ಚ | ರೂ.5,500+ ಬ್ಯಾಂಕ ಸೇವಾ ವೆಚ್ಚ |

**ಸೂಚನೆ:** ಈಗಾಗಲೇ ನಿಗದಿತ ಶುಲ್ಕವನ್ನು ಸಂಬಂಧಪಟ್ಟ ಕಾಲೇಜನಲ್ಲಿ ಪಾವತಿಸಿ, ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳು ಮತ್ತೊಮ್ಮೆ ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ. ಅದರಂತೆ ಈಗಾಗಲೇ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳ ಹೆಸರುಗಳನ್ನು (ಕನ್ನಡ ಹಾಗೂ ಇಂಗ್ಲಿಷ ನಲ್ಲಿ) ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ದಿ:15.12.2017

ರಂದು ಪ್ರಚುರ ಪಡಿಸಲಾಗುವುದು. ತಮ್ಮ ಹೆಸರಿನಲ್ಲಿ ಯಾವುದೇ ತಿದ್ದುಪಡಿ ಮಾಡಬೇಕಾಗಿದ್ದಲ್ಲಿ ಅದನ್ನು ದಿ:31.12.2017 ರ ಒಳಗಾಗಿ ಸಂಬಂದಪಟ್ಟ ಅಗತ್ಯ ದಾಖಲಾತಿಯೊಂದಿಗೆ ಕುಲಸಚಿವರಿಗೆ ತಿಳಿಸುವುದು.

**ಆದೇಶದ ಮೇರೆಗೆ**

**ಸಹಿ/-**
**ಕುಲಸಚಿವರು**

**ಪ್ರತಿ** – ಸೂಚನಾ ಫಲಕಗಳಿಗೆ

**ಪ್ರ.ಆ.ಸೂ:** 1) ಡೀನ್ (ಸ್ನಾತಕೋತ್ತರ)/ಸಂಶೋಧನಾ ನಿರ್ದೇಶಕರು/ವಿಸ್ತರಣಾ ನಿರ್ದೇಶಕರು/ ಹಣಕಾಸು ನಿಯಂತ್ರಣಾಧಿಕಾರಿಗಳು/ ಡೀನ್ (ವಿದ್ಯಾರ್ಥಿ ಕಲ್ಯಾಣ) / ಆಡಳಿತಾಧಿಕಾರಿಗಳು/ ಆಸ್ತಿ ಅಧಿಕಾರಿಗಳು/ ಗ್ರಂಥಪಾಲಕರು, ತೋ.ವಿ.ವಿ, ಬಾಗಲಕೊಟೆ.

2) ಎಲ್ಲಾ ಡೀನ್‌ಗಳು, ತೋಟಗಾರಿಕೆ ಮಹಾವಿದ್ಯಾಲಯಗಳು,ತೋ.ವಿ.ವಿ, ಬಾಗಲಕೊಟ.

3) ಎಲ್ಲಾ ಮಹಾವಿದ್ಯಾಲಯಗಳ ಶೈಕ್ಷಣಿಕ ವಿಭಾಗ /ಹಣಕಾಸು ವಿಭಾಗಗಳು, ತೋ.ವಿ.ವಿ, ಬಾಗಲಕೊಟೆ.

4) ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತೋ.ವಿ.ವಿ, ಬಾಗಲಕೋಟ

ಆ.ಸೂ.ಪ್ರ.:-1) ಕುಲಸಚಿವರು, ಕೃವಿವಿ., ಬೆಂಗಳೂರು

2) ಕುಲಸಚಿವರು, ಕೃವಿವಿ., ಧಾರವಾಡ

3) ಕುಲಸಚಿವರು, ಕೃವಿವಿ., ರಾಯಚೂರ

4) ಕುಲಸಚಿವರು, ಪ.ವೈ.ವಿ., ಬೀದರ

5) ಕುಲಸಚಿವರು,ಕೃ &ತೋ.ವಿ, ಶಿವಮೊಗ್ಗ

ಆ.ಸೂ.ಪ್ರ.- ಶಿಕ್ಷಣ ನಿರ್ದೇಶಕರು, ತೋ.ವಿ.ವಿ, ಬಾಗಲಕೊಟೆ ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.